

ದೇವೇಂದ್ರನ ಪದವಿ ಪಡೆಯಲು ವಿಶ್ವಾಮಿತ್ರ ಘೋರ ತಪಸ್ಸನ್ನು ಮಾಡಿದ. ಆತನ ತಪಸ್ಸು ದೇವೇಂದ್ರನ ನಿದ್ದೆಗೆಡಿಸಿತ್ತು. ತಪಸ್ಸು ಹೀಗೇ ಮುಂದುವರಿದರೆ ತನ್ನ ಪದವಿ ಕಳೆದುಕೊಳ್ಳಬೇಕಾಗಬಹುದು ಎಂಬ ಆತಂಕದಿಂದ ಇಂದ್ರನೊಂದು ಉಪಾಯ ಮಾಡಿದ. ದೇವರಾಜನ ಸೂಚನೆಯ ಮೇರೆಗೆ ವಿಶ್ವಾಮಿತ್ರನ ತಪೋಭಂಗಕ್ಕೆ ಮೇನಕೆ ಮುಂದಾದಳು. ಸ್ವರ್ಗದಿಂದ ಧರೆಗಿಳಿದ ಮೇನಕೆ, ಕಗ್ಗಾಡಿನಲ್ಲಿ ತಪಸ್ಸು ಮಾಡುತ್ತಿದ್ದ ವಿಶ್ವಾಮಿತ್ರನ ಎದುರು ಬಂದು ತನ್ನ ಮೋಹಪಾಶವನ್ನು ಪ್ರಯೋಗಿಸಿದಳು. ಸುರಸ್ತ್ರೀಯ ಮದನಬಾಣಗಳಿಗೆ ವಿಶ್ವಾಮಿತ್ರ ಕರಗಿ ನೀರಾದ. ಮೇನಕೆಯ ಮೋಹದಲ್ಲಿ ಮಿಂದೆದ್ದ. ಆ ಮಿಲನದ ಫಲಿತಾಂಶವಾಗಿ ಒಂದು ಹೆಣ್ಣುಮಗು ಜನನವಾಯಿತು. ಅದನ್ನು ವಿಶ್ವಾಮಿತ್ರನಿಗೆ ನೀಡಲು ಬಂದ ಮೇನಕೆಯನ್ನು ಉದ್ದೇಶಿಸಿ, 'ನಾನೊಬ್ಬ ತಪಸ್ವಿ ನನಗೇಕೆ ಈ ರಗಳೆ' ಎಂದು ಹೊರಟುಹೋದ. ಆಕೆಗೂ ಬಂಧನ ಬೇಕಿರಲಿಲ್ಲ. 'ಇಂದ್ರನ ಆಜ್ಞೆಯ ಮೇರೆಗೆ ಬಂದವಳು ನಾನು. ಬಂದ ಕೆಲಸವಾಯಿತು. ಇನ್ನು ನೀನುಂಟು, ನಿನ್ನ ಮಗುವುಂಟು' ಎಂದು ಆಕೆಯೂ ದೇವಲೋಕಕ್ಕೆ ಹೊರಟುಹೋದಳು. ದಿಕ್ಕಿಲ್ಲದ ಮಗುವನ್ನು ನೋಡಿಕೊಂಡ ಶಕುಂತ ಪಕ್ಷಿಗಳ ಹೆಸರನ್ನೇ ಮುಂದೆ ಕಣ್ವ ಮಹರ್ಷಿಗಳು ಮಗುವಿಗೆ ಇಟ್ಟರು. ಆಕೆಯೇ ಶಕುಂತಲಾ.

ಮೇಲಿನ ಕಥೆಯಲ್ಲಿ ಈ ಲೇಖನಕ್ಕೆ ಅಗತ್ಯವಾದುದು ಶಕುಂತಲೆಯಲ್ಲ, ಮೇನಕೆ. 'ಹನಿ ಟ್ರ್ಯಾಪ್' ಎನ್ನುವ ಮೋಹಕ ಬಲೆಯ ರೂಪದಲ್ಲಿ ಮೇನಕೆ ಪುರಾಣಪುಟಗಳ ಉದಾಹರಣೆಯಾಗಿ ಕಾಣಸಿಗುತ್ತಾಳೆ.

ಇಡೀ ಜಗತ್ತನ್ನು ಅನಾದಿ ಕಾಲದಿಂದ ಇಂದಿನವರೆಗೂ ಕಾಡುತ್ತಿರುವ 'ಹನಿ ಟ್ರ್ಯಾಪ್' ಎಂಬ ಮೋಹಪಾಶಕ್ಕೆ ಅತಿರಥ ಮಹಾಮಹಾರಥರೇ ಸೋತಿದ್ದರೆ. ಕೆಲ ಕ್ಷಣ ಮೈಮರೆತಿದ್ದಕ್ಕೆ ಹಲವರು ಮನೆ, ಮಠ, ಹಣ, ಸಂಪತ್ತು, ಅಧಿಕಾರ, ಉದ್ಯೋಗ, ಕಡೆಗೆ ಮರ್ಯಾದೆಯನ್ನೂ ಕಳೆದುಕೊಂಡ ಉದಾಹರಣೆಗಳಿವೆ. ಆದರೆ, ಬೆಳಕಿಗೆ ಬಾರದ ಇನ್ನೂ ಹಲವು ಸಂಗತಿಗಳು 'ಒಳ ಒಪ್ಪಂದ'ಗಳಲ್ಲೇ ಕೊನೆಗೊಂಡಿವೆ. ಹದಿಹರೆಯದವರು ಮಾತ್ರವಲ್ಲ, ಇಳಿ ವಯಸ್ಸಿನವರೂ 'ಬೇಟದ ಬೇಟೆ'ಗೆ ಬಲಿಯಾದದ್ದುಂಟು. ಸುಂದರ ಯುವತಿಯರನ್ನು ಸೇನೆಯ ಅಧಿಕಾರಿಗಳಿಗೆ ಪರಿಚಯಿಸಿ, ಆಕೆಯ ಹಸಿಬಿಸಿ ಸಖ್ಯದ ಮೂಲಕ ದೇಶದ ರಕ್ಷಣಾವ್ಯೂಹದಲ್ಲಿ ರಂಧ್ರಗಳನ್ನು ಕೊರೆದ ಉದಾಹರಣೆಗಳು ವಿಶ್ವಭೂಪಟದಲ್ಲಿ ಸಾಕಷ್ಟಿವೆ. ಉನ್ನತ ವ್ಯಕ್ತಿಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಬಳಕೆಯಾಗುತ್ತಿದ್ದ 'ಹನಿ ಟ್ರ್ಯಾಪ್' ತಂತ್ರಗಾರಿಕೆ ಆಧುನಿಕ ಸಂದರ್ಭದಲ್ಲಿ ಜನಸಾಮಾನ್ಯರಿಗೂ ಖೆಡ್ಡಾ ಆಗಿ ಪರಿಣಮಿಸಿದೆ. ವಿವಾಹಬಾಹಿರ ಸಂಬಂಧವನ್ನು ಬಯಲು ಮಾಡುವ ಬೆದರಿಕೆಯೊಡ್ಡಿ ಹಣ ಪೀಕಿರುವ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಕಾರ್ಪೊರೇಟ್, ಬ್ಯೂರೊಕ್ರಾಟ್, ರಾಜಕಾರಣಿಗಳು, ಶ್ರೀಮಂತರು, ಜನಸಾಮಾನ್ಯರು — ಹೀಗೆ 'ಸುಂದರಿ'ಯರ ಮೋಹಪಾಶಕ್ಕೆ ಸಿಲುಕಿದವರು ಅಸಂಖ್ಯಾತರು. ಕ್ಷಣದ ಸುಖಕ್ಕೆ ಬದುಕನ್ನೇ ಬಲಿಕೊಟ್ಟು ಭ್ರಷ್ಟರಾದವರ ಸಂಖ್ಯೆ ಹೆಚ್ಚುತ್ತಲೇ ಇದೆ.

ಪುರಾಣ, ಚರಿತ್ರೆಯ ಕಥನಗಳಲ್ಲಿ 'ವಿಷಕನ್ಯೆ'ಯರ ಪ್ರಸ್ತಾಪ ಬರುತ್ತದೆ. ಸುಂದರ ಹೆಣ್ಣುಗಳಿಗೆ ನಿತ್ಯವೂ ಸ್ವಲ್ಪಸ್ವಲ್ಪವೇ ವಿಷವನ್ನು ನೀಡುತ್ತಾ ಅವರನ್ನು ವಿಷಕನ್ಯೆಯರನ್ನಾಗಿ

